ಹೊರಟ ಗೆಳೆಯ, ಗೆಳತಿಯರೂ ಇದ್ದಾರೆ. ಆದರೆ ಈ ಬಗೆಯ ಪ್ರಕಾರಗಳನ್ನು ಬಳಸುವವರು ನನ್ನ ಕತೆಗಳಿಗೆ ಅವರ ಭಾಷೆ ಸೇರಿಸಿದ ತಕ್ಷಣ, ಅದು ನನ್ನ ಕತೆಗಳ ಮೇಲೆ ಹಲ್ಲೆ ಮಾಡಿದಂತೆ ಅನಿಸುತ್ತದೆ! 'ಆ ಕತೆಗಳನ್ನು ಅವುಗಳ ಪಾಡಿಗೆ ಬಿಟ್ಟು ಬಿಡಿ' ಎಂದಿರುವುದೂ ಉಂಟು. ನನ್ನ ಕತೆಗಳನ್ನು ಅವರು ಕಿರುಚಿತ್ರ, ಸಿನಿಮಾ, ನಾಟಕ ಇತ್ಯಾದಿ ಮಾಡಲೆತ್ನಿಸಿದಾಗ ಅವನ್ನು ನೋಡಲು ನನಗೆ ನಿಜಕ್ಕೂ ಭಯವಾಗುತ್ತದೆ... ಅವನ್ನೆಲ್ಲ ಇತರ ಪ್ರಕಾರಗಳಿಗೆ ರೂಪಾಂತರ ಮಾಡಿದರೆ, ಕೊನೆಯ ಪಕ್ಷ ಶಬ್ದಗಳನ್ನು, ವಾಕ್ಯಗಳನ್ನು ಆಯಾ ಕತೆಗಳ, ಪಾತ್ರಗಳ ಮನಸ್ಥಿತಿಗೆ ಒಗ್ಗುವಂತೆ ಬದಲಾವಣೆ ಮಾಡಲು ನಾನೇ ಪ್ರಯತ್ನಿಸಬೇಕು ಎನ್ನಿಸುತ್ತದೆ.

● ನಿಮ್ಮ ಕತೆಗಳ ಯಶಸ್ಸಿನ ಬಗೆಗಿನ ಖುಷಿಯ ಕ್ಷಣಗಳು

ಒಂದಲ್ಲ, ಹಲವು. ಹೊತ್ತು ಹೋಗುವುದೇ ಗೊತ್ತಾಗದೆ, ಸುತ್ತ ಏನು ನಡೆಯುತ್ತದೆ ಎಂಬುದೇ ನನ್ನ ಗಮನಕ್ಕೆ ಬರದಂತೆ ಬರೆಯುತ್ತಾ ಇರುವುದೇ ನನಗೆ ಅತ್ಯಂತ ಅರ್ಥಪೂರ್ಣ ಕೆಲಸ ಅನ್ನಿಸುತ್ತದೆ. ನಾನು ಬರೆಯಹೊರಟದ್ದಕ್ಕೆ ವಿರುದ್ಧವಾಗಿ ಬೆಳೆದ ಕತೆಗಳು ನನ್ನಲ್ಲಿ ವಿಸ್ಮಯವನ್ನೂ ಪುಳಕವನ್ನೂ ಹುಟ್ಟಿಸಿವೆ. ಗುಲಬರ್ಗಾದಲ್ಲಿ ಒಂದು ವರ್ಷ ಇದ್ದ ಅನುಭವದ ಆಧಾರದಿಂದ ನಾನು ಬರೆದ 'ಕಾಳವ್ವನ ಮೂಗು' ಕತೆಯಲ್ಲಿ ಸೃಷ್ಟಿಸಿದ ಆ ಸುತ್ತಿನ ಎರಡು ಪಾತ್ರಗಳು ಹಾಗೂ ಅವು ಬಳಸುವ ಆ ಸುತ್ತಮುತ್ತಲ ಭಾಷೆ ಇವೆರಡರ ಅಥೆಂಟಿಸಿಟಿಯನ್ನೂ ಅಲ್ಲಿನ ಲೇಖಕರು ಒಪ್ಪಿಕೊಂಡಾಗ, ನಿಜಕ್ಕೂ ಬರೆದದ್ದು ಸಾರ್ಥಕ ಅನ್ನಿಸಿತ್ತು. ಹದಿನೇಳನೆಯ ವಯಸ್ಸಿನಲ್ಲಿ ನನ್ನ ಕತೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಭಾನುವಾರ; 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಮೊದಲ ಬಹುಮಾನ ಬಂದ ಗಳಿಗೆ; ನಾನು ಬಹು ಕಾಲ ಬರೆದ 'ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು' ಮೊದಲು 'ಮಯೂರ'ದ ತಿಂಗಳ ಕತೆಯಾಗಿ ಆಯ್ಕೆಯಾಗಿ, ನಂತರ ವರ್ಷದ ಕತೆಯಾಗಿ ಆಯ್ಕೆಯಾದದ್ದನ್ನು ಕುರಿತ ಸುದ್ದಿ... ಇವೆಲ್ಲವೂ ತಂದ ಆನಂದ ನೆನಪಾಗುತ್ತದೆ. ದೆಹಲಿಯ 'ಕಥಾ' ಸಂಸ್ಥೆ ಪ್ರಕಟಿಸಿದ ನನ್ನ 'ಮಾಯಾ ಕಿನ್ನರಿ' ಕತೆಯ ಇಂಗ್ಲಿಷ್ ಅನುವಾದವನ್ನು 1991ರಿಂದ 2000ನೆಯ ಇಸವಿಯ ನಡುವಣ ಅತ್ಯುತ್ತಮ ಕನ್ನಡ ಕತೆಯೆಂದು ಗಂಭೀರ ಸಿನಿಮಾ ನಿರ್ದೇಶಕ ಅಡೂರ್ ಗೋಪಾಲಕೃಷ್ಣನ್ ಆರಿಸಿದ ಗಳಿಗೆ ನನ್ನಲ್ಲಿ ಅಪಾರ ಆತ್ಮವಿಶ್ವಾಸ ಹುಟ್ಟಿಸಿತ್ತು.

ಈ ಆಯ್ಕೆಯ ಹಿನ್ನೆಲೆ ಇದು: ಭಾರತೀಯ ಭಾಷೆಗಳ ಕತೆಗಳ ಅನುವಾದಗಳನ್ನು ಪ್ರಕಟಿಸುತ್ತಿದ್ದ ದೆಹಲಿಯ 'ಕಥಾ' ಸಂಸ್ಥೆ 1991ರಿಂದ 2000ದವರೆಗೆ ಪ್ರತಿವರ್ಷ ಭಾರತೀಯ ಭಾಷೆಗಳ ಒಂದು ಉತ್ತಮ ಕತೆಯನ್ನು ಆಯಾ ಭಾಷೆಯ ವಿಮರ್ಶಕರ ಮೂಲಕ ಆರಿಸಿ, ಇಂಗ್ಲಿಷಿನಲ್ಲಿ ಅನುವಾದಿಸಿ ಪ್ರಕಟಿಸಿ, ಕಥಾ ವಾರ್ಷಿಕ ಬಹುಮಾನ ಕೊಡುತ್ತಿತ್ತು. ಅವನ್ನು 'ಕಥಾ ಪ್ರೈಝ್ ಸ್ಟೋರೀಸ್' ಸಂಪುಟಗಳಾಗಿ ಪ್ರತಿ ವರ್ಷ ಪ್ರಕಟಿಸುತ್ತಿತ್ತು. 2001ರಲ್ಲಿ ಅನೇಕ ಭಾರತೀಯ ಭಾಷೆಗಳ ಹತ್ತು ವರ್ಷಗಳ ಕತೆಗಳಿಂದ ಆಯ್ದ ಪ್ರತಿ ಭಾಷೆಯ ತಲಾ ಹತ್ತು ಕತೆಗಳಲ್ಲಿ ಒಂದನ್ನು ಆಯ್ದು, ಬಹುಮಾನ ಕೊಟ್ಟು 'ಕಥಾ ಪ್ರೈಝ್ ಸ್ಟೋರೀಸ್: ಬೆಸ್ಟ್ ಆಫ್ ದಿ ನೈಂಟೀಸ್' ಎಂಬ ಸಂಕಲನ ವನ್ನು ಪ್ರಕಟಿಸಿತು. ಇಂಗ್ಲಿಷಿಗೆ ಅನುವಾದಗೊಂಡ ಕನ್ನಡ ಕತೆಗಳ ತೀರ್ಪುಗಾರರಾಗಿದ್ದ ಅಡೂರ್ ಗೋಪಾಲಕೃಷ್ಣನ್ ಅವರು ಕನ್ನಡದ ಕತೆಗಾರರಾದ ಅನಂತಮೂರ್ತಿ, ಲಂಕೇಶ್, ತೇಜಸ್ವಿ, ವೈದೇಹಿ, ಎಸ್. ದಿವಾಕರ್, ಬೊಳುವಾರು ಮೊದಲಾದ ಹಿರಿಯರ ಕತೆಗಳ ನಡುವೆ ನನ್ನ ಕತೆ ಯನ್ನು ಆರಿಸಿದ್ದರು ಎಂಬ ಸಂಗತಿ ಹಲವು ವರ್ಷಗಳ ಕಾಲ ನನಗೆ 'ಒಳ ಕಿಕ್' ಕೊಡುತ್ತಲೇ ಇತ್ತು!